# ಪುಟಾಣಿ ಡಾಕ್ಟರ್

ಕೈಯಲಿ ಹಿಡಿದು ಸ್ಟೆತಾಸ್ಕೋಪು
ಬಂದಿತು ನೋಡು ಪುಟಾಣಿ ಪಾಪು
ಬೆಳ್ಳನೆ ಕೋಟನು ಧರಿಸಿಹ ಡಾಕ್ಟರ್
ಕಂಕುಳಲ್ಲಿ ತೂರಿಸಿ ಥರ್ಮೋಮೀಟರ್

ಬಾಯನು ಬಿಡಿಸುವ ಟಾರ್ಚನು ಹಾಕಿ
ಮಲಗಿಸಿ ಎಬ್ಬಿಸಿ ಪರೀಕ್ಷೆಯು ಬಾಕಿ
ಸೂಜಿಯ ತೋರಿಸಿ ಚುಚ್ಚುವ ಜೋಕೆ
ಒಲ್ಲೆನು ಎಂದರೆ ಹಾಕುವ ಧಮಕಿ

ಔಷಧಿ ಗುಳಿಗೆಯ ಕುಡಿಸಲು ಬರುವ
ಕಹಿ ವಿಷವೆನ್ನಲು ಸಿಹಿಯನು ಕೊಡುವ
ಪೆನ್ನಲಿ ಗೀಚುತ ಚೀಟಿಯ ತೋರುತ
ಉಚಿತ ಸಲಹೆಯ ನೀಡುತ ತಣಿವ

ಪುಟಾಣಿ ಬಾಲನ ವೈದ್ಯನ ಲೀಲೆಯು
ದಣಿದಿಹ ಮನಕೆ ಮುದದ ಆರಾಮ
ಕುಣಿಯುವ ನಲಿಯುವ ಮುದ್ದಿನ ಆಟಕೆ
ಖುಷಿಪಡೆ ದೊರೆವುದು ಪೂರ್ಣ ವಿರಾಮ

● **ಡಾ. ನಿತ್ಯಾನಂದ ಸುಂಡವಾಳು**

ಕಲೆ: ಗಣೇಶ ಆಚಾರ್ಯ

